**ಓ.ಎಸ್. ನಂ. 69/2018** **ಪಿ.ಡಬ್ಲ್ಯೂ- 2**

<u>ಸಾಕ್ಷಿಯನ್ನು ದಿನಾಂಕ **6.8.2022** ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u> ನಾನು ವ್ಯವಸಾಯ ಮಾಡುತ್ತೇನೆ ಮತ್ತು 10 ನೇ ತರಗತಿ ಓದಿರುತ್ತೇನೆ. ನನ್ನ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಹಳೆ ಸರ್ವೆ ನಂ 11 ಆಗಿರುತ್ತದೆ ಮತ್ತು ಹೊಸ ಸರ್ವೆ ನಂ 39 ಆಗಿರುತ್ತದೆ. ನನ್ನ ಜಮೀನು 4 ಎಕರೆ ಇರುತ್ತದೆ ಆ ಕಾರಣ ನನ್ನ ಜಮೀನಿನ ಸರ್ವೆ ನಂ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಪಶ್ಚಿಮ ಕಡೆಗೆ ನನ್ನ ಜಮೀನು ಇರುತ್ತದೆ. ಅದರ ಸರ್ವೆ ನಂ 9 ಮತ್ತು 10 ಆಗಿರುತ್ತದೆ. ನನ್ನ ಮೇಲೆ 1 ಕ್ರಿಮಿನಲ್ ಪ್ರಕರಣ ಇರುತ್ತದೆ ಮತ್ತು 2 ಸಿವಿಲ್ ವ್ಯಾಜ್ಯ ಇರುತ್ತದೆ.ಮೊದಲು ದಾವಾ ಸ್ವತ್ತು ಕುಳ್ಳು ದಾಸಯ್ಯನವರ ಹೆಸರಿನಲ್ಲಿತ್ತು ಈಗ ಶಾರದಮ್ಮರವರ ಹೆಸರಿನಲ್ಲಿ ಇರುತ್ತದೆ. ಸದರಿ ಸ್ವತ್ತು ಶಾರದಮ್ಮ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಶಾರದಮ್ಮ ಖರೀದಿ ಮಾಡಿರುತ್ತಾರೆಂದು ನನಗೆ ವಾದಿಗಳು ಹೇಳಿ ದಾಖಲೆಯನ್ನು ತೋರಿಸಿರುತ್ತಾರೆ ಆದರೆ ಯಾವಾಗ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೊದಲು ಕಮಲಮ್ಮರವರು ಸ್ವಾಧೀನ ಹೊಂದಿದ್ದರು, ಈಗ ಶಾರದಮ್ಮ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಂಬಂಧಪಟ್ಟಂತೆ ಏನೇನು ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕುಳ್ಳು ದಾಸಯ್ಯರವರ ದಾವಾ ಸ್ವತ್ತು ಸಾಗುವಳಿ ಮುಾಲಕ ಬಂದಿರುತ್ತದೆ ಆದರೆ ಯಾವ ವರ್ಷದಲ್ಲಿ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿಯಂತೆ ಅಕ್ಕ ಪಕ್ಕ ನನ್ನ ಜಮೀನು ಇರುವುದಿಲ್ಲ. ದಾವಾ ಸ್ವತ್ತು ಮೂಲತಃ 1 ನೇ ಪ್ರತಿವಾದಿಯವರ ಕುಟರುಂಬಸ್ಥರ ಹೆಸರಿನಲ್ಲಿತ್ತು ಅವರು 10 ನೇ ಪ್ರತಿವಾದಿಗೆ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರದ ಮುಖಾಂತರ 10 ನೇ ಪ್ರತಿವಾದಿ ಸ್ವಾಧೀನ ಹೊಂದಿರುತ್ತಾರೆ, ಅವರು ಈ ದಿನದ ವರೆಗೂ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಸಣ್ಣಯ್ಯರವರಿಗೆ ಸೇರಿದ ಜಮೀನಿಗೆ ಸಂಬಂಧಪಟ್ಟಂತೆ ಸುಳ್ಳು ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡುವುದು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುವ ಹವ್ಯಾಸ ಹೊಂದಿರುತ್ತೇನೆ ಎಂದರೆ ಸರಿಯಲ್ಲ. 2 ನೇ ವಾದಿಯ ಮಾತು ಕೇಳಿಕೊಂಡು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.